44

# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1153+1154
ಸದಸ್ಯರ ಹೆಸರು : ಶ್ರೀ ಎಸ್. ರವಿ ಹಾಗೂ ಕುಶಾಲಪ್ಪ ಎಂ.ಪಿ (ಸುಜಾ)
(ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು)
ಉತ್ತರಿಸುವ ಸಚಿವರು : ಮಾನ್ಯ ಮುಖ್ಯಮಂತ್ರಿಯವರು
ಉತ್ತರಿಸುವ ದಿನಾಂಕ : 19.12.2024

| ಪ್ರಶ್ನೆ | ಉತ್ತರ |
|---|---|
| ಅ) ರಾಜ್ಯ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳನ್ನು ಭರ್ತಿ ಮಾಡುವಾಗ ರಿಕ್ತಸ್ಥಾನ ಆಧಾರಿತ ವರ್ಗೀಕರಣದ ಬದಲಾಗಿ ಹುದ್ದೆ ಆಧಾರಿತ ವರ್ಗೀಕರಣವನ್ನುಅನುಸರಿಸುವ ಕುರಿತು ದಿನಾಂಕ: 10/12/2021 ರಂದು ಸರ್ಕಾರ ಹೊರಡಿಸಿರುವ ಆದೇಶವಿದ್ದಾಗ್ಯೂ ಸಹ ಆಡಳಿತ ಇಲಾಖೆಗಳು ಅನುಸರಿಸದಿರುವುದನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದೆಯೇ; ಹಾಗಿದ್ದಲ್ಲಿ, ಈ ಆದೇಶವನ್ನು ಕಡ್ಡಾಯವಾಗಿ ಅನುಸರಿಸುವ ಕುರಿತು ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ಮಾಹಿತಿನೀಡುವುದು) | ರಾಜ್ಯ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳನ್ನು ಭರ್ತಿ ಮಾಡುವಾಗ ರಿಕ್ತಸ್ಥಾನ ಆಧಾರಿತ ವರ್ಗೀಕರಣದ ಬದಲಾಗಿ ಹುದ್ದೆ ಆಧಾರಿತ ವರ್ಗೀಕರಣವನ್ನು ಅನುಸರಿಸುವ ಕುರಿತು ದಿನಾಂಕ: 10/12/2021 ರಂದು ಸರ್ಕಾರದಿಂದ ಹೊರಡಿಸಿರುವ ಅಧಿಕೃತ ಜ್ಞಾಪನದಲ್ಲಿ ನೀಡಿರುವ ಮಾರ್ಗಸೂಚನೆಗಳನ್ನು ಇಲಾಖೆಗಳು ಅನುಸರಿಸದೇ ಇರುವುದು ಗಮನಕ್ಕೆ ಬಂದಿರುವುದಿಲ್ಲ. |
| ಆ) ಈ ಆದೇಶವನ್ನು ಅನುಸರಿಸದಿರುವ ಇಲಾಖೆಗಳ ವಿರುದ್ಧ ಸರ್ಕಾರ ಕ್ರಮ ಕೈಗೊಳ್ಳುವುದೇ; ಹಾಗಿದ್ದಲ್ಲಿ, ಯಾವಾಗ ಮತ್ತು ಯಾವ ರೀತಿ ಕ್ರಮ ಕೈಗೊಳ್ಳಲಾಗುವುದು; ಕ್ರಮ ಕೈಗೊಳ್ಳುವ ಕುರಿತು ಕಾಲಮಿತಿಯೇನಾದರೂ ವಿಧಿಸಿದೆಯೇ; (ಮಾಹಿತಿನೀಡುವುದು) | |
| ಇ) ಜೇಷ್ಠತಾ ಪಟ್ಟಿಗಳನ್ನು ಪ್ರಕಟಿಸುವ ಕುರಿತು ಮೇಲಿನ ಆದೇಶವನ್ನು ಹೊರತುಪಡಿಸಿ ಸರ್ಕಾರ ಇತ್ತೀಚೆಗೆ ಆದೇಶಗಳೇನಾದರೂ ಹೊರಡಿಸಿದೆಯೇ, ಹಾಗಿದ್ದಲ್ಲಿ, ಅವುಗಳ ಪ್ರತಿಗಳನ್ನು ನೀಡುವುದು; ಹೊರಡಿಸದಿದ್ದಲ್ಲಿ, ಮೇಲಿನ ಆದೇಶದನ್ವಯ ಮುಂದಿನ ದಿನಗಳಲ್ಲಿ ಅಂತಿಮ ಜೇಷ್ಠತಾ ಪಟ್ಟಿಗಳನ್ನು ಆಡಳಿತ ಇಲಾಖೆಗಳು ಪ್ರಕಟಿಸುವಂತೆ ಸರ್ಕಾರ ಕ್ರಮ ಕೈಗೊಳ್ಳುವುದೇ; ಹಾಗಿದ್ದಲ್ಲಿ, ಯಾವ ರೀತಿಯ ಕ್ರಮ ಕೈಗೊಳ್ಳುವುದು; ಕೈಗೊಳ್ಳದಿದ್ದಲ್ಲಿ, ಕಾರಣಗಳೇನು; ಈ | ಕರ್ನಾಟಕ ಸರ್ಕಾರಿ ನೌಕರರ (ಜೇಷ್ಠತೆ) ನಿಯಮಗಳು, 1957ರ ನಿಯಮ 10ರ ಅನುಸಾರ ಪ್ರತಿ ವರ್ಷವೂ ಸೇವೆಯ ಪ್ರತಿ ವೃಂದ ಅಥವಾ ಪ್ರತಿ ವರ್ಗದ ಹುದ್ದೆಗಳಲ್ಲಿನ ಎಲ್ಲಾ ಅಧಿಕಾರಿಗಳ ಜೇಷ್ಠತಾ ಪಟ್ಟಿಯನ್ನು ಅವರ ಜೇಷ್ಠತೆಗೆ ಅನುಗುಣವಾಗಿ ಸೇರಿಸಿ ಸಿದ್ಧಪಡಿಸಬೇಕಾಗಿರುತ್ತದೆ. ಈ ಸಂಬಂಧ ಈ ಹಿಂದೆ ಹೊರಡಿಸಲಾದ ಅಧಿಕೃತ ಜ್ಞಾಪನಗಳನ್ನು ಪುನರಾವಲೋಕನೆ ಮಾಡಿ ಪರಿಷ್ಕೃತ ನಮೂನೆಗಳನ್ನು ದಿನಾಂಕ: 10/12/2021ರ ಸರ್ಕಾರದ |

| | |
|---|---|
| ಕುರಿತು ಪುನ: ಸುತ್ತೋಲೆ ಅಥವಾ ಜ್ಞಾಪನವನ್ನು ಹೊರಡಿಸುವುದೇ; (ಮಾಹಿತಿ ನೀಡುವುದು) | ಅಧಿಕೃತ ಜ್ಞಾಪನದಲ್ಲಿ ನೀಡಲಾಗಿರುತ್ತದೆ.<br><br>ಅಲ್ಲದೆ ಇಲಾಖೆಯ ಪ್ರತಿಯೊಂದು ವೃಂದದ ಜೇಷ್ಠತಾ ಪಟ್ಟಿಯನ್ನು ದಿನಾಂಕ:01.01.2025ಕ್ಕೆ ಪ್ರಕಟಿಸಲು ಕ್ರಮವಹಿಸುವಂತೆ ದಿನಾಂಕ:19.11.2024 ರಂದು ಸೂಚನೆಗಳನ್ನು ನೀಡಲಾಗಿರುತ್ತದೆ. |
| ಈ) ರಾಜ್ಯ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳನ್ನು ಭರ್ತಿ ಮಾಡುವಾಗ ರಿಕ್ತಸ್ಥಾನ ಆಧಾರಿತ ವರ್ಗೀಕರಣದ ಬದಲಾಗಿ ಹುದ್ದೆ ಆಧಾರಿತ ವರ್ಗೀಕರಣವನ್ನು ಅನುಸರಿಸುವ ಕುರಿತು ಮೇಲಿನ ಆದೇಶವನ್ನು ಅನುಸರಿಸಲು ಆಡಳಿತ ಇಲಾಖೆಗಿರುವ ಸಮಸ್ಯೆಗಳೇನು; ಈ ಕುರಿತು ಸರ್ಕಾರದ ನಿಲುವೇನು? (ಮಾಹಿತಿನೀಡುವುದು) | ದಿನಾಂಕ: 10.12.2021ರ ಅಧಿಕೃತ ಜ್ಞಾಪನದಲ್ಲಿ ನೀಡಿರುವ ಮಾರ್ಗಸೂಚಿಗಳನ್ನು ಅನುಷ್ಠಾನಗೊಳಿಸುವ ಬಗ್ಗೆ ಇಲ್ಲಿಯವರೆಗೂ ಯಾವುದೇ ಇಲಾಖೆಯಿಂದ ಸಮಸ್ಯೆ ಯಾಗಿರುವ ಕುರಿತು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. |

ಸಂಖ್ಯೆ: ಸಿಆಸುಇ 414 ಸೆನೆನಿ 2024

(ಸಿದ್ದರಾಮಯ್ಯ)
ಮುಖ್ಯಮಂತ್ರಿ